

ಕನ್ನಡ ಚಿತ್ರರಂಗಕ್ಕೀಗ ಸಂಭ್ರಮದ ಕಾಲ. 2018ರಲ್ಲಿ ಭಾರತದಲ್ಲಿಯೇ ಅತಿ ಹೆಚ್ಚು ಸಿನಿಮಾಗಳನ್ನು ತೆರೆಗೆ ತಂದ 'ಸ್ಯಾಂಡಲ್‌ವುಡ್', 66ನೇ ರಾಷ್ಟ್ರಪ್ರಶಸ್ತಿಗಳ ಪಟ್ಟಿಯಲ್ಲಿ ಅತಿ ಹೆಚ್ಚು ಪ್ರಶಸ್ತಿಗಳನ್ನು ಪಡೆದಿದೆ. ಒಂದೇ ವರ್ಷ ಹನ್ನೊಂದು ರಾಷ್ಟ್ರಪ್ರಶಸ್ತಿಗಳನ್ನು ಪಡೆದಿರುವುದು ಕರ್ನಾಟಕದ ಮಟ್ಟಿಗೆ ಇದೇ ಮೊದಲು. ಈ ಸಂಭ್ರಮವನ್ನು ನೋಡಿದರೆ ಕನ್ನಡ ಚಿತ್ರರಂಗದಲ್ಲಿ ಚಿನ್ನದಗೆರೆ ಕಾಣಿಸಿಕೊಂಡಂತೆ ಭಾಸವಾಗುತ್ತಿದೆ. ಆದರೆ, ಈ ಗೆರೆ ನಿಜವಾದ ಚಿನ್ನದ್ದೋ ಅಥವಾ ಕಾಗೆಬಂಗಾರವೋ ಎನ್ನುವುದನ್ನು ಒರೆಗೆ ಹಚ್ಚಲು ಇದು ಸಕಾಲ.

■ ರಘುನಾಥ ಚ.ಹ.